ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.

**ದಿನಾಂಕ: 26-01-2025 ರಂದು ಆಚರಿಸಿದ**

# ಗಣರಾಜ್ಯೋತ್ಸವದ

## ಸಚಿತ್ರಗಳ ಪಕ್ಷಿ ನೋಟ

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ಭಾರತದ ಗಣ ರಾಜ್ಯೋತ್ಸವ ಕಾರ್ಯಕ್ರಮವನ್ನು ದಿನಾಂಕ: 26-01-2025 ರಂದು ಗುರುವಾರದ ಬೆಳಿಗ್ಗೆ 09-00 ಗಂಟೆಯಿಂದ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಂಘದ ಆವರಣದಲ್ಲಿರುವ ಧ್ವಜ ಸ್ಥಂಭದ ಬಳಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಸಂವಿಧಾನ ಶಿಲ್ಪಿ ಶ್ರೀ ಡಾ॥ ಬಿ. ಆರ್. ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.











ಪ್ರತೀತಿಯಂತೆ ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ. ಎಮ್.ಎನ್. ಮಂಜೇಗೌಡ ರವರ ನಿರೂಪಣೆಯೊಂದಿಗೆ ಪ್ರಾರಂಭಿಸಲಾಯಿತು.



ಶ್ರೀಯುತ ಕೆ. ಬಿ. ಬೆಟ್ಟೇಗೌಡ, ಅಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ಹಾಗೂ ರವರು ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರು ಹಾಗೂ ಹಿರಿಯ ಸದಸ್ಯರೊಡಗೂಡಿ ಧ್ವಜಾರೋಹಣವನ್ನು ನೆರವೇರಿಸಿದರು.



ಹಾಜರಿದ್ದವರೆಲ್ಲರೂ ರಾಷ್ಟ್ರ ಧ್ವಜಕ್ಕೆ ವಂದನೆ ಸಲ್ಲಿಸಿದರು. ಧ್ವಜ ವಂದನೆ ಜೊತೆಗೆ ರಾಷ್ಟ್ರಗೀತೆಯನ್ನು ನುಡಿಸಲಾಯಿತು.



ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿಯವರಾದ, ಶ್ರೀಯುತ ಎಮ್. ಶಂಕರಪ್ಪ, ರವರು ಸಂಘದ ಅಧ್ಯಕ್ಷರು ಹಾಗೂ ಎಲ್ಲ ಹಿರಿಯ/ಕಿರಿಯ ಸದಸ್ಯರು ಮತ್ತು ಆಗಮಿಸಿದ್ದ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು.





ಹಿರಿಯ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಗಣರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮಕ್ಕೆ ಹಾಜರಾಗಿ ತಮ್ಮ ದೇಶ ಭಕ್ತಿಯನ್ನು ಮೆರೆದರು.





ಮುಂದುವರಿದು, ಶ್ರೀಯುತ ಎಮ್. ಶಂಕರಪ್ಪ, ರವರು ಭಾರತವು ಸರ್ವತಂತ್ರ ಸ್ವತಂತ್ರ ಪ್ರಜಾಸತ್ತಾತ್ಮಕ ಗಣರಾಜ್ಯವಾಗಲು ಹಲವಾರು ಮಹನೀಯರ ಕೊಡುಗೆಯ ದ್ಯೋತಕವೆಂದೂ, ಇದರಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ರವರ ಪರಿಶ್ರಮವೆಂದೂ, ಸ್ವತಂತ್ರವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು, ಅದರ ಘನತೆಯನ್ನು ಎತ್ತಿ ಹಿಡಿದಾಗ ಮಾತ್ರ ಗಣರಾಜ್ಯದ ತತ್ವವು ಸಾರ್ಥಕವಾಗುತ್ತದೆಂದು ಪ್ರಾಸ್ತಾವಿಕ ನುಡಿದರು.



ಹಿರಿಯ ಸದಸ್ಯರ ಭಾಷಣದಲ್ಲಿ, ಹಿರಿಯ ಸದಸ್ಯರಾದ ಶ್ರೀಯುತ ಸಿ. ಮೋಹನ್ ರವರು ಹಿಂದಿನ ಹಾಗೂ ತಮ್ಮ ಸೇವಾವಧಿಯಲ್ಲಿದ್ದ ರಾಜಕಾರಣಿಗಳ ನಡವಳಿಕೆ, ಪ್ರಸ್ತುತ ಸಮಯದಲ್ಲಿರುವ ಪರೋಕ್ಷ/ಪ್ರತ್ಯಕ್ಷ ಹಸ್ತಕ್ಷೇಪಗಳ ಬಗ್ಗೆ ಬೇಸರವಾಗಿ ನುಡಿದರು. ಸಮಾಜದಲ್ಲಿ ಶಿಸ್ತು ಬದ್ಧ ಜೀವನ, ಪ್ರಸ್ತುತ ಸಮಾಜದಲ್ಲಿ ಎದುರಿಸಬೇಕಾದ ಸವಾಲುಗಳ ಬಗ್ಗೆ ಚುಟುಕಾಗಿ ತಮ್ಮ ದೇಶ ಭಕ್ತಿ ಸಂದೇಶವನ್ನು ಸಾರಿದರು.



ಮತ್ತೊಬ್ಬ ಸದಸ್ಯರಾದ ಶ್ರೀಯುತ ಎ. ಕುಮಾರಸ್ವಾಮಿ ರವರು ಮೊದಲಿಗೆ ತಮ್ಮ ಪರಿಚಯವನ್ನು ಮಾಡಿಕೊಟ್ಟರು. ಶ್ರೀಯುತರು ಮೊಟ್ಟಮೊದಲಿಗೆ ಭಾರತೀಯ ವಾಯುಸೇನೆಯಲ್ಲಿ ಏರ್‌ಮನ್ ಆಗಿ ಸೇರ್ಪಡೆಗೊಂಡು, ಸಾರ್ಜೆಂಟ್ ಆಗಿ ಪದೋನ್ನತಿ ಹೊಂದಿ, ಸುಮಾರು 20 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತಿ ಹೊಂದುತ್ತಾರೆ.















ಮುಂದುವರಿದು, ಶ್ರೀಯುತರು ಗಣರಾಜ್ಯೋತ್ಸವದ ಸಂದರ್ಭದಲ್ಲಿ ಭಾರತೀಯ ಸಂವಿಧಾನದ, ಪ್ರಾರಂಭದಿಂದ ಪ್ರಸ್ತುತ ಅವಧಿಯವರೆಗೆ ಆದ ತಿದ್ದುಪಡಿಗಳ ಮುಖ್ಯಾಂಶಗಳನ್ನು ಸಮಯೋಚಿತವಾಗಿ ಸಂಕ್ಷಿಪ್ತವಾಗಿ ಪ್ರಸ್ತುತಪಡಿಸಿ ಎಲ್ಲರ ಮನಸ್ಸನ್ನು ಪುನಶ್ಚೇತನ ಗೊಳಿಸಿ ಮೂಕವಿಸ್ಮಿತರನ್ನಾಗಿಸಿದರು.





ತದನಂತರ, ಶ್ರೀಯುತರು ಮಾಜಿ ಯೋಧರ ಕೋಟಾದಡಿಯಲ್ಲಿ ಪಿ.ಎಸ್.ಐ. ಆಯ್ಕೆ ಆಗಿ ಸೇವೆ ಸಲ್ಲಿಸುತ್ತಿರುವಾಗಲೇ, ಡಿ.ಎಸ್.ಪಿ. ಆಗಿ ನೇರ ಆಯ್ಕೆಯಾಗಿ ಐ.ಪಿ.ಎಸ್. ಗೆ ಭಡ್ತಿ ಹೊಂದುತ್ತಿರುವಾಗಲೇ ನಿವೃತ್ತಿಯಾದುದನ್ನು ನೆನಪಿಸಿಕೊಂಡರು.



ತದನಂತರ ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀಯುತ ಕೆ.ಬಿ. ಬೆಟ್ಟೇಗೌಡ ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಈ ಹಿಂದೆ ಮಾಡಿದ ಭಾಷಣಕಾರರ ಔಚಿತ್ಯವನ್ನು ಶ್ಲಾಘಿಸಿದರು. ಸ್ವಾತಂತ್ರ್ಯ ಹಾಗೂ ಗಣರಾಜ್ಯ ದಿನಗಳ ಪ್ರಸಂಗಗಳನ್ನು ವಿಷದವಾಗಿ ಬಣ್ಣಿಸಿದರು.

ಮುಂದುವರಿದು, ಶ್ರೀಯುತರು ರಾಷ್ಟ್ರ ಪ್ರೇಮ, ಶಿಸ್ತಿನ ಬಗ್ಗೆ ಸಾಮಾಜಿಕ ಕಳಕಳಿಯ ಜಾಗೃತಿ ಮೂಡಿಸುವ ಕುರಿತು ಮುಂದಿನ ದಿನಗಳಲ್ಲಿ ಅನುಷ್ಠಾನಗೊಳಿಸುವ ಸಂಬಂಧವಾಗಿ ಯೋಜನೆ ರೂಪಿಸುವ ಬಗ್ಗೆ ಚಿಂತಿಸಲಾಗುವುದೆಂದು ತಿಳಿಸಿದರು.











ಈ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಲು ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷರಾದ ಶ್ರೀಯುತ ಎಮ್. ವಿ. ಶೇಷನ್ ರವರು ಸಂವಿಧಾನದ ಪೀಠಿಕೆಯಲ್ಲಿರುವ ಅಂಶಗಳನ್ನು ಒತ್ತಿ ಹೇಳಿದರು. ಗಣರಾಜ್ಯೋತ್ಸವದ ಬಗ್ಗೆ ಎಂದಿನಂತೆ ತಮ್ಮಲ್ಲಿರುವ ಪದ ಸಂಪತ್ತಿಯಿಂದ ಆಂಗ್ಲ ಮಿಶ್ರಿತ ಕನ್ನಡದಲ್ಲಿ ನಿರರ್ಗಳವಾಗಿ ಮಾತನಾಡಿ, ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಸೇರಿದಂತೆ, ಹಿರಿಯ/ಕಿರಿಯ ಸದಸ್ಯರು, ಇನ್ನಿತರರು ಧ್ವಜಾರೋಹಣ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಯಾಗಿ ಸಂಪನ್ನಗೊಳಿಸಿದುದನ್ನು ಸ್ಮರಿಸುತ್ತಾ, ಕೃತಜ್ಞತಾ ಪೂರ್ವಕ ಧನ್ಯವಾದಗಳ ವಂದನಾರ್ಪಣೆ ತಿಳಿಸಿದರು.



ಸಂಘದ ವತಿಯಿಂದ ಎಲ್ಲರಿಗೂ ವ್ಯವಸ್ಥೆ ಮಾಡಲಾಗಿದ್ದ ಲಘು ಉಪಹಾರದೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಗಿರುತ್ತದೆ.





















ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವಲಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ. ಎಮ್.ಎನ್. ಮಂಜೇಗೌಡ ರವರ ನಿರೂಪಣೆಯೊಂದಿಗೆ ದೇಶ ಭಕ್ತಿ ಗೀತೆಯನ್ನು ಹಾಡಿ ಕಾರ್ಯಕ್ರಮದ ಶೋಭೆಯನ್ನು ಹೆಚ್ಚಿಸಿದರು.



ಪ್ರತೀ ಮಾತುಗಾರರ ನಂತರ, ಅವರು ಆಡಿದ ಮಾತುಗಳ ಸಂಕ್ಷಿಪ್ತ ರೂಪಗಳನ್ನು ಪ್ರಸ್ತುತ ಪಡಿಸುತ್ತಿದ್ದುದು ಅವರ ಸುದೀರ್ಘ ಸೇವೆ ಹಾಗೂ ಅವರ ಅನುಭವದ ವೇದ್ಯವಾಗುತ್ತಿತ್ತು.





ಸಂಘವು ಆಯೋಜಿಸಿದ್ದ ಸರಳ ಸಮಾರಂಭಕ್ಕೆ ಹಿರಿಯ/ಕಿರಿಯ ಸದಸ್ಯರು, ಇನ್ನಿತರರು ಹಾಜರಿದ್ದು ಸಮಾರಂಭದ ಸಂಭ್ರಮಕ್ಕೆ ಶೋಭೆ ತಂದು ಯಶಸ್ವಿಯಾಗಲು ಸಹಕರಿಸಿದರು.

**ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ,**
**ಬೆಂಗಳೂರು – 560 023.**

* * * * *